DEEDS Since 1982

# DEEDS ಸಂವಾದ

ಸಮತೆಯ ಸಮಾಜದೆಡೆಗೆ

ಸಂವಾದ 6

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿಮ್ಮೊಂದಿಗೆ ..........



**ಯಂಕಮ್ಮ ಉಪ್ಪಾರ**
ಸುಗಮಗಾರರು

ಗದಗ ಹಾಗೂ ಕೊಪ್ಪಳದ ಜನ ಸಾಮಾನ್ಯ ಮಹಿಳೆಯರಾದ ನಾವು ನಮ್ಮಷ್ಟಕ್ಕೆ ನಮ್ಮ ಸಂಸ್ಥೆ ನಿಗದಿ ಪಡಿಸಿದ ಕೆಲಸಗಳನ್ನು ಮಾಡುತ್ತಾ ಇದ್ದವರು. ಡೀಡ್ಸ್ ಸಂಸ್ಥೆ ನಮ್ಮಲ್ಲಿಗೆ ಬಂದು ನಿಮಗೆ ಕಾನೂನು ಕಲಿಸುತ್ತೇವೆ, ನಿಮ್ಮನ್ನು ಸುಗಮಗಾರರನ್ನಾಗಿಸುತ್ತೇವೆ, ಕಾನೂನು ಮಹಿಳೆಯರಿಗೆ ತಮ್ಮ ಸಮಸ್ಯೆಗಳನ್ನು ಎದುರಿಸಲು ಬಲವಾದ ಅಸ್ತ್ರ ಎಂದು ಹುರಿದುಂಬಿಸಿದರು. ಕಬ್ಬಿಣದ ಕಡಲೆಯಂತಿರುವ ಕಾನೂನು ನಮಗೆ ಅರ್ಥವಾದೀತೇ ಎಂಬ ಸಂಶಯ ಹಾಗೂ ಕುತೂಹಲದಿಂದಲೇ ನಮ್ಮ ನಮ್ಮ ಸಂಸ್ಥೆಯವರ ಸಹಕಾರದೊಂದಿಗೆ ಈ ಕಾರ್ಯಕ್ರಮದಲ್ಲಿ ಸೇರಿಕೊಂಡೆವು.

ತೀರಾ ಸರಳ ಭಾಷೆಯಲ್ಲಿ ನಮಗೆ ಅರ್ಥವಾಗುವ ಹಾಗೆ ಕಾನೂನನ್ನು ನಮ್ಮ ಬಳಿಗೆ ತಂದಿದೆ ಡೀಡ್ಸ್. ಪೂರಕ ಕಾನೂನು ತರಬೇತಿಯಿಂದ ಮಹಿಳೆಯರಿಗೆ ಕಾನೂನಿನ ಅಡಿಯಲ್ಲಿ ಇರುವ ರಕ್ಷಣೆಯ ಕುರಿತು ಮಾಹಿತಿ ದೊರೆತಿದೆ. ಅವರಿಗೆ ತಮ್ಮ ಕಷ್ಟ ಕಾರ್ಪಣ್ಯಗಳನ್ನು ಹೇಳಿಕೊಳ್ಳಲು ಒಂದು ವೇದಿಕೆ ದೊರೆಯಿತು. ಮಹಿಳೆಯರು ಕಾನೂನು ಮಾಹಿತಿಯಿಂದ ತುಂಬಾ ಧೈರ್ಯವಂತರಾಗುತ್ತಿದ್ದಾರೆ. ಹಾಗೂ ಸಶಕ್ತರಾಗುತ್ತಿದ್ದಾರೆ. ಕಾನೂನು ಮಾಹಿತಿಯನ್ನು ಪಡೆದ ಮಹಿಳೆಯರು ಕ್ಯಾಲೆಂಡರ್ ಹಾಗೂ ಕರಪತ್ರಗಳನ್ನು ಮನೆಗೆ ಹಂಚುವುದರ ಮೂಲಕ ಹಾಗೂ ತಾವು ತಿಳಿದುಕೊಂಡ ಮಾಹಿತಿಯನ್ನು ಇನ್ನಷ್ಟು ಮಹಿಳೆಯರಿಗೆ ತಿಳಿಸುವುದರ ಮೂಲಕ ಸಮುದಾಯದಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಯಾವ ಮಹಿಳೆಯರು ಕ್ಯಾಲೆಂಡರ್, ಕರಪತ್ರ ಹಂಚಿದ್ದರೋ ಆ ಮಹಿಳೆಯರಿಗೆ ಕೇಸ್‌ಗಳು ಬರಲು ಪ್ರಾರಂಭಿಸಿದವು. ಆಗ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಿದ್ದಾರೆ. ಅನೇಕ ಮಹಿಳೆಯರ ದಾಖಲೆಗಳಲ್ಲಿ ಹೆಸರು ಬದಲಾವಣೆ ಆಗಿದ್ದವು. ದಾಖಲೆಗಳ ಕುರಿತು ಮಾಹಿತಿ ಹೇಳಿದ ನಂತರ ದಾಖಲೆಗಳ ತಿದ್ದುಪಡಿ ಮಾಡಿಸಿಕೊಂಡಿದ್ದಾರೆ. ಹಲವರು ವಿವಾಹ ನೋಂದಣಿ ಮಾಡಿಸಿಕೊಂಡಿದ್ದಾರೆ. ಬಾಲ್ಯವಿವಾಹ ಕಡಿಮೆಯಾಗುತ್ತಿದೆ. ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರು ಪ್ರಕರಣ ದಾಖಲಿಸುತ್ತಿದ್ದಾರೆ. ಗದಗಿನ ಕೊಡಗಾನೂರು ಗ್ರಾಮದಲ್ಲಿ ಮಹಿಳೆಯರು ಬಾಲ್ಯವಿವಾಹದ ಕ್ಯಾಲೆಂಡರನ್ನು ಮನೆಮನೆಗೆ ಹೋಗಿ ಸ್ವತಃ ಗೋಡೆಗೆ ಹಾಕಿ ಬಂದಿದ್ದಾರೆ. ಇದರಿಂದ 10 ಬಾಲ್ಯವಿವಾಹಗಳು ನಿಂತಿವೆ.

ಈಗ ಮಹಿಳೆಯರು ಸಮಸ್ಯೆ ಇದೆ ಎಂದು ಮನೆಯ ಒಳಗೆ ಕುಳಿತು ಕೊಳ್ಳುತ್ತಿಲ್ಲ. ಬದಲಾಗಿ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಮನೆಯಿಂದ ಹೊರಗೆ ಬಂದು ಪ್ರಕರಣಗಳನ್ನು ನಿಭಾಯಿಸಲು ಸಿದ್ಧರಾಗುತ್ತಿದ್ದಾರೆ. ಪ್ರಶ್ನೆ ಮಾಡುವುದರ ಮೂಲಕ ತಮ್ಮ ಹಕ್ಕುಗಳನ್ನು ಪಡೆಯುತ್ತಿದ್ದಾರೆ. ಶಾಲಾ ಭೇಟಿ, ಅಂಗನವಾಡಿ, ಆರೋಗ್ಯ ಕೇಂದ್ರ ಭೇಟಿ, ಪಂಚಾಯಿತಿಗೆ ಭೇಟಿ ಹೀಗೆ ಇಲಾಖೆಗಳಿಗೆ ಭೇಟಿ ನೀಡಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ತಮಗೆ ಬೇಕಾದ ಸೌಲಭ್ಯಗಳನ್ನು ಕೇಳಿ ಅವುಗಳನ್ನು ಪಡೆಯಲು ಧೈರ್ಯದಿಂದ ಹೊರಟಿದ್ದಾರೆ.

ಮೊನ್ನೆಯಷ್ಟೇ ಸುಗಮಗಾರರ ಮತ್ತು ಭಾಗಾರ್ಥಿಗಳ ದೊಡ್ಡ ಸಮಾವೇಶವನ್ನು ಸಂಘಟಿಸುವ ಅವಕಾಶವನ್ನು ಡೀಡ್ಸ್ ನಮಗೆ ಒದಗಿಸಿತ್ತು. ಅದೊಂದು ನಮ್ಮ ಪಾಲಿನ ಸಂಭ್ರಮದ, ಸ್ಮರಣೀಯ ದಿನ. ಪ್ರತಿ ಜಿಲ್ಲೆಯಲ್ಲೂ ಸುಮಾರು 250 ಮಂದಿ ಮಹಿಳೆಯರು ಒಟ್ಟಾಗಿ ಸಮಾವೇಶದಲ್ಲಿ ಭಾಗವಹಿಸಿರುವುದನ್ನು ಅತಿಥಿಗಳು ಸಹ ಗುರುತಿಸಿ ಪ್ರಶಂಶಿಸಿರುವುದು, ಹಲವು ಸುಗಮಗಾರರನ್ನು ಕಾನೂನು ಸೇವಾ ಪ್ರಾಧಿಕಾರವು ಪಾರಾಲೀಗಲ್ ವಾಲಂಟೀರ್ಸ್ ಆಗಿ ನೇಮಿಸಿರುವುದು ನಮ್ಮ ಕೆಲಸದ ಬಗೆಗೆ ನಮ್ಮಲ್ಲಿ ಮತ್ತಷ್ಟೂ ಹುರುಪು ಮೂಡಿಸಿದೆ. ಈ ಹುರುಪು ಇಷ್ಟಕ್ಕೇ ನಿಂತು ಹೋಗಬಾರದು. ಮುಂದೆ ಆಗಬೇಕಾದ ಕೆಲಸಗಳು ಬೆಟ್ಟದಷ್ಟಿವೆ. ವ್ಯವಸ್ಥೆಯಲ್ಲಿ ಲಿಂಗಸೂಕ್ಷ್ಮತೆ ಬೆಳೆಯಬೇಕಿದೆ. ಕಾನೂನು ಅರಿವಿಗೆ ಸಮುದಾಯದಲ್ಲಿ ಹೆಚ್ಚಿನ ಸ್ಪಂದನೆ ದೊರೆಯಬೇಕಿದೆ. ನ್ಯಾಯಾಂಗ ಸಂವೇದನಾಶೀಲವಾಗಬೇಕಿದೆ. ಇಂತಹ ಎಲ್ಲ ಕೆಲಸಗಳ ಹಿನ್ನೆಲೆಯಲ್ಲಿ ಕಾನೂನು ಸಾಕ್ಷರತೆಯ ರೂವಾರಿಗಳಾದ ನಮಗೆ ಹೆಚ್ಚಿನ ಜವಾಬ್ದಾರಿಯಿದೆ. ನಾವು ನಮ್ಮದೇ ಆದ ಒಂದು ತಂಡವನ್ನು ರೂಪಿಸಿ ಅದು ರಾಜ್ಯದಲ್ಲಿ ಸಾಂಸ್ಥಿಕ ರೂಪವನ್ನು ಪಡೆಯುವಂತಾಗಬೇಕು. ಹೀಗೆ ಬೆಳೆದು ನಿಲ್ಲುವುದೇ ಸುಗಮಗಾರರನ್ನಾಗಿ ನಮ್ಮನ್ನು ಬೆಳೆಸಿದ ಡೀಡ್ಸ್ ಸಂಸ್ಥೆಗೆ ನಾವು ಕೊಡಬಹುದಾದ ಬಹುದೊಡ್ಡ ಉಡುಗೊರೆ ಎಂದು ಭಾವಿಸುತ್ತೇವೆ.



ಈ ಸಂಚಿಕೆಯನ್ನು ರೂಪಿಸುವ ಜವಾಬ್ದಾರಿಯನ್ನು ಕಲಿಕೆಯ ಭಾಗವಾಗಿ ಸುಗಮಗಾರರಿಗೆ ಡೀಡ್ಸ್ ನೀಡಿದೆ. ನಮಗೆ ತೋಚಿದ ಹಾಗೆ ಈ ಸುದ್ದಿ ಪತ್ರದಲ್ಲಿ ಅಕ್ಷರಗಳ ಜೊತೆಗೆ ನಮ್ಮ ಭಾವನೆಗಳನ್ನು ಜೋಡಿಸಿದ್ದೇವೆ. ಪ್ರೀತಿಯಿಂದ ಸ್ವೀಕರಿಸುತ್ತೀರಿ ಎಂದು ಭಾವಿಸುತ್ತೇವೆ.

ಕಾನೂನನ್ನು ಎಲ್ಲರ ಮನೆಬಾಗಿಲಿಗೆ ತಲಪಿಸುವ ನಿಟ್ಟಿನಲ್ಲಿ ನಾವೆಲ್ಲರೂ ಹೆಜ್ಜೆ ಹಾಕೋಣ ಎಂದು ಆಶಿಸುತ್ತಾ ಎಲ್ಲ ಸುಗಮಗಾರರ ಪರವಾಗಿ ಡೀಡ್ಸ್ ಸಂಸ್ಥೆಗೆ ನಾನು ವಂದನೆಗಳನ್ನು ಸಲ್ಲಿಸುತ್ತೇನೆ.

# ಪೂರಕ ಕಾನೂನು ಸುಗಮಗಾರರು ಮತ್ತು ಭಾಗಾರ್ಥಿಗಳ ಸಮಾವೇಶ

**ಗದಗ**

ಡೀಡ್ಸ್ ಮಂಗಳೂರು, ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸಂಚಲನ, ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಪೂರಕ ಕಾನೂನು



ಸುಗಮಗಾರರ ಘಟಕ ಇವರ ಸಹಯೋಗದಲ್ಲಿ ದಿನಾಂಕ 16-09-2019 ರಂದು ಪೂರಕ ಕಾನೂನು ಸುಗಮಗಾರರ ಮತ್ತು ಭಾಗಾರ್ಥಿಗಳ ಸಮಾವೇಶವನ್ನು ಮರಾಠಾ ಸಮುದಾಯ ಭವನದಲ್ಲಿ ನಡೆಸಲಾಯಿತು. ಸಮಾವೇಶದ ಉದ್ಘಾಟಕರಾಗಿ ಶ್ರೀ ಜಿ.ಎಸ್.ಸಂಗ್ರೇಶಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರು ಆಗಮಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀನಾಥ ಜೋಶಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಎಸ್.ಜಿ.ಸಲಗರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಅಕ್ಕಮಹಾದೇವಿ ಕೆ.ಹೆಚ್, ಧಾರವಾಡದ ದೀಕ್ಷಾ ಸಂಸ್ಥೆಯ ಸಿ.ಲಿನೆಟ್ ಡಿ'ಸಿಲ್ವಾ ಇವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು. ಕೆಲ ಭಾಗಾರ್ಥಿಗಳು ಹಾಗೂ ಸುಗಮಗಾರರು ತರಬೇತಿಯಿಂದ ತಮಗಾದ ಪ್ರಯೋಜನವನ್ನು ಆಪ್ತವಾಗಿ ಹಂಚಿಕೊಂಡರು. ಡೀಡ್ಸ್‌ನ ಮರ್ಲಿನ್ ಮಾರ್ಟಿಸ್, ಮೋಹನ್‌ಚಂದ್ರ ಯು ತುಕಾರಾಮ ಎಕ್ಕಾರು ಉಪಸ್ಥಿತರಿದ್ದರು. ಗದಗ ಸಂಚಲನದ ಅಧ್ಯಕ್ಷೆ ಪ್ರಭಾವತಿ ಬೆಟಗೇರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶದಲ್ಲಿ ಸುಗಮಗಾರರು, ಸಹಭಾಗಿ ಸ್ವಯಂ ಸೇವಾ ಸಂಘಟನೆಯ ಮುಖ್ಯಸ್ಥರು, ಜಿಲ್ಲಾ ಸಂಚಲನ, ರಾಜ್ಯ ಸಂಚಲನ, ಭಾಗಾರ್ಥಿಗಳು ಸೇರಿ ಅಂದಾಜು 250 ಸದಸ್ಯರು ಭಾಗವಹಿಸಿದ್ದರು.

---

**ಕೊಪ್ಪಳ**

ಕೊಪ್ಪಳದ ಇಸಿಐ ಕ್ರಿಸ್ತಜ್ಯೋತಿ ಸಭಾಂಗಣದಲ್ಲಿ 18.9.2019 ರಂದು ಡೀಡ್ಸ್, ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಕೊಪ್ಪಳ ಜಿಲ್ಲಾ ಪೂರಕ ಕಾನೂನು ಸುಗಮಗಾರರ ಸಮುಚ್ಚಯ, ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳು ಇವರ ಸಹಯೋಗದಲ್ಲಿ, ಪೂರಕ ಕಾನೂನು ಸುಗಮಗಾರರ ಮತ್ತು ಭಾಗಾರ್ಥಿಗಳ ಸಮಾವೇಶವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಟಿ ಶ್ರೀನಿವಾಸರವರು ಮತ್ತು ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ರೀ ಈರಣ್ಣ ಪಂಚಾಳ್ ಆಗಮಿಸಿದ್ದರು. ಡೀಡ್ಸ್‌ನ ಮರ್ಲಿನ್ ಮಾರ್ಟಿಸ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅಧ್ಯಕ್ಷತೆಯನ್ನು ಭುವನೇಶ್ವರಿ ಬಡಿಗೇರ ಅವರು ವಹಿಸಿದರು. ಕೆಲ ಸುಗಮಗಾರರು ಮತ್ತು ಭಾಗಾರ್ಥಿಗಳು ತರಬೇತಿ ಅನುಭವಗಳನ್ನು ಹಂಚಿಕೊಂಡರು. ಮೋಹನ್‌ಚಂದ್ರರವರು ಉಪಸ್ಥಿತರಿದ್ದರು. ನರಸಿಂಹರಾಜು ಕೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಮಹಿಳಾ ವೃತ್ತಿ ಶಿಕ್ಷಣ ಸಂಸ್ಥೆ, ಸರ್ವೋದಯ, ಅಭಿನವ ಶ್ರೀ ಸಿದ್ಧೇಶ್ವರ ಸಂಸ್ಥೆ , ಕಾರ್ಗಿಲ್ ಮಲ್ಲಯ್ಯ ವಿಕಲಚೇತನರ ಸಂಘ, ಸಹಜಾ ಟ್ರಸ್ಟ್ , ವೆಡ್ಸ್ ಸಂಸ್ಥೆ , ಕೆ ಹೆಚ್.ಪಿ.ಟಿ, ಧ್ವನಿ ಸಂಸ್ಥೆ, ಸಂಭ್ರಮ, ಯುನಿಸೆಫ್ ಸಂಸ್ಥೆಗಳ ಪ್ರತಿನಿಧಿಗಳು, 20 ಜನ ಪೂರಕ ಕಾನೂನು ಸುಗಮಗಾರರು ಮತ್ತು 145 ಕ್ಕಿಂತಲೂ ಹೆಚ್ಚು ಭಾಗಾರ್ಥಿಗಳು ಭಾಗವಹಿಸಿದ್ದರು.. ಮಲ್ಲಪ್ಪ ಹೆಚ್ ಸ್ವಾಗತಿಸಿ, ವಿರೇಶ್ ಹಾಲಗುಂಡಿ ನಿರೂಪಿಸಿ, ಆನಂದ ಹಳ್ಳಿಗುಡಿ ವಂದಿಸಿದರು, ಶರಣಪ್ಪ ಉಪ್ಪಾರ ಸಮಾವೇಶದ ಉಸ್ತುವಾರಿ ವಹಿಸಿದರು.



**ಸಮುದಾಯದಲ್ಲಿ ಕಾನೂನು ಅರಿವು**

ಡೀಡ್ಸ್ ನ ತರಬೇತಿ ಭಾಗಾರ್ಥಿಗಳ ಜ್ಞಾನಮಾಪನದ ಪ್ರಕಾರ ಈ ಮೂರು ವರ್ಷದ ಯೋಜನೆಯಲ್ಲಿ ಗದಗಿನಲ್ಲಿ 85%, ಕೊಪ್ಪಳದಲ್ಲಿ 53.13% ಲಿಂಗತ್ವ ಜ್ಞಾನ, ಗದಗಿನಲ್ಲಿ 92.29%, ಕೊಪ್ಪಳದಲ್ಲಿ 70.31% ಕಾನೂನು ಜ್ಞಾನವನ್ನು ತಳಹಂತದ ಮಹಿಳೆಯರು ಹೊಂದಿದ್ದಾರೆ. ಗದಗಿನಲ್ಲಿ 40.63%, ಕೊಪ್ಪಳದಲ್ಲಿ 25% ಮಂದಿ ಕೌಟುಂಬಿಕ ದೌರ್ಜನ್ಯ, ಗದಗಿನಲ್ಲಿ 38.33%, ಕೊಪ್ಪಳದಲ್ಲಿ 22.50% ಮಂದಿ ಪೋಕ್ಸೋ, ಗದಗಿನಲ್ಲಿ 30.83%, ಕೊಪ್ಪಳದಲ್ಲಿ 3.75% ಮಂದಿ ಮದುವೆ ನೋಂದಣಿ ವಿಷಯಗಳಲ್ಲಿ ಪ್ರಕರಣಗಳನ್ನು ನಿಭಾಯಿಸಲು ಸಿದ್ಧರಾಗಿರುವುದು ಕಂಡುಬಂದಿದೆ.

# ಗದಗ ಜಿಲ್ಲೆ

## ಮದ್ಯಪಾನ ನಿಷೇಧ ಜಾಥಾ

ಹಿರೇವಡ್ಡಟ್ಟಿ ಗ್ರಾಮದ ಭಾಗಾರ್ಥಿ ಮಹಿಳೆಯರು ಮತ್ತು ಸಂಜೀವಿನಿ ಒಕ್ಕೂಟದ ಮಹಿಳೆಯರು 3-12-2018 ರಂದು ಸಾರಾಯಿ ನಿಷೇಧ,



ಕೌಟುಂಬಿಕ ದೌರ್ಜನ್ಯ ತಡೆ, ಬಾಲ್ಯವಿವಾಹ ತಡೆ ಕುರಿತು ಜಾಥಾ ಮತ್ತು ಪ್ರತಿಭಟನೆಯನ್ನು ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ನಡೆಸಿದರು. ಪೊಲೀಸ್ ಇಲಾಖೆಯವರು ಹಾಗೂ ಅಬಕಾರಿ ಇಲಾಖೆಯವರು ಆಗಮಿಸಿದ್ದರು. ಊರಿನಲ್ಲಿ ಸಾರಾಯಿ ಸಂಪೂರ್ಣವಾಗಿ ನಿಷೇಧ ಆಗಬೇಕು ಎಂದು ಒತ್ತಾಯಿಸಿ ಅಧಿಕಾರಿಗಳಿಗೆ ಮನವಿಯನ್ನು ನೀಡಿದರು.

## ಪೂರಕ ಕಾನೂನು ತರಬೇತಿ



ಒಂದು ದಿನದ ಪೂರಕ ಕಾನೂನು ತರಬೇತಿ ಕಾರ್ಯಕ್ರಮವನ್ನು ಎಪ್ರಿಲ್ 28 ರಂದು ಗದಗಿನ ಮರಾಠಾ ವಿದ್ಯಾವರ್ಧಕ ಸಂಘದಲ್ಲಿ ನಡೆಸಿದ್ದು ತರಬೇತಿಯಲ್ಲಿ ಎನ್.ಆರ್.ಎಲ್.ಎಮ್. ಸಿಬ್ಬಂದಿಗಳು ಮತ್ತು ಸಂಜೀವಿನಿ ಒಕ್ಕೂಟದ ಪದಾಧಿಕಾರಿಗಳು ಸೇರಿದಂತೆ ಒಟ್ಟು 36 ಭಾಗಾರ್ಥಿಗಳು ಭಾಗವಹಿಸಿದ್ದರು. ಲಿಂಗ-ಲಿಂಗತ್ವ, ಬಾಲ್ಯವಿವಾಹ ನಿಷೇಧ ಕಾಯ್ದೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಪೋಕ್ಸೋ ಕಾಯ್ದೆ, ಕಡ್ಡಾಯ ವಿವಾಹ ನೋಂದಣಿ ಕಾಯ್ದೆ ಮುಖ್ಯ ವಿಷಯಗಳಾಗಿದ್ದವು. ಪ್ರಭಾವತಿ ಬೆಟಗೇರಿ, ಫಕ್ಕೀರಮ್ಮ ಲಕ್ಕುಂಡಿ, ಉಮಾ ಬಾರ್ಕಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

## ಕಲಿಕಾ ಪ್ರವಾಸ

ಡೀಡ್ಸ್ ಸಂಸ್ಥೆಯು ಪೂರಕ ಕಾನೂನು ಸುಗಮಗಾರರಿಗಾಗಿ ಮೇ 12 ರಂದು ಹಮ್ಮಿಕೊಂಡ ಒಂದು ದಿನದ ಕಲಿಕಾ ಪ್ರವಾಸದಲ್ಲಿ ಒಟ್ಟು 22 ಸುಗಮಗಾರರು ಪಾಲ್ಗೊಂಡಿದ್ದರು. ಗೊಟಗೋಡಿ ರಾಕ್ ಗಾರ್ಡನ್, ಸವಣೂರಿನ ವಿಶ್ವವಿಖ್ಯಾತ ದೊಡ್ಡಹುಣಸೆ ಕಲ್ಪವೃಕ್ಷಗಳು, ಲಕ್ಷ್ಮೇಶ್ವರದ



ಐತಿಹಾಸಿಕ ಹಿನ್ನೆಲೆಯುಳ್ಳ ಪುಲಿಗೆರೆ ಸೋಮನಾಥ ದೇವಾಲಯ, ಸಣ್ಣ ತಿರುಪತಿ ದೇವಸ್ಥಾನ ಇವುಗಳಿಗೆ ಭೇಟಿ ನೀಡಿ ಸಂತಸ ಗೊಂಡರು. ಮುಂದಿನ ಕಾರ್ಯಯೋಜನೆಗಳ ಬಗ್ಗೆ ಚರ್ಚೆಯನ್ನೂ ನಡೆಸಲಾಯಿತು.

## ಮಹಿಳಾ ಪ್ರಕರಣಗಳ ನಿರ್ವಹಣಾ ಕಾರ್ಯತಂತ್ರ ಕಾರ್ಯಾಗಾರ

ದಿನಾಂಕ 14-06-2019 ರಂದು ಕಾರ್ಯತಂತ್ರ ಕಾರ್ಯಾಗಾರವು



ಮರಾಠಾ ಸಮುದಾಯ ಭವನದಲ್ಲಿ ನಡೆದು 19 ಪಿ.ಎಲ್.ಎಫ್.ನವರು ಹಾಗೂ ನಾಲ್ಕು ಮಂದಿ ಸಂಚಲನದ ಸದಸ್ಯರು ಭಾಗವಹಿಸಿದ್ದರು. ಡೀಡ್ಸ್‌ನ ಸಲಹೆಗಾರರಾದ ಮೋಹನ್‌ಚಂದ್ರರವರು ಪೂರಕ ಕಾನೂನು ಸುಗಮಗಾರರ ಜವಾಬ್ದಾರಿಗಳು ಹಾಗೂ ಅವರ ಮುಂದಿರುವ ಸವಾಲುಗಳ ಕುರಿತು ಚರ್ಚೆ ನಡೆಸಿದರು. ಫಕ್ಕೀರಮ್ಮ ಲಕ್ಕುಂಡಿಯವರು ಎಲ್ಲರನ್ನು ಸ್ವಾಗತಿಸಿ ವಂದಿಸಿದರು. ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು ಹಾಜರಿದ್ದು ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

## ಪೂರಕ ಕಾನೂನು ಸುಗಮಗಾರರ ಘಟಕದ ಸಭೆ

ದಿನಾಂಕ 14-07-2019 ರಂದು ಪೂರಕ ಕಾನೂನು ಸುಗಮಗಾರರ ಘಟಕದ ಸಭೆಯನ್ನು ಮರಾಠಾ ಸಮುದಾಯ ಭವನದಲ್ಲಿ ನಡೆಸಲಾಯಿತು.



18 ಪಿ.ಎಲ್.ಎಫ್.ನವರು ಮತ್ತು ಸಂಚಲನದ ನಾಲ್ಕು ಮಂದಿ ಸದಸ್ಯರು ಸಭೆಯಲ್ಲಿ ಭಾಗವಹಿಸಿದರು. ತುಕಾರಾಮ ಎಕ್ಕಾರು ಹಾಜರಿದ್ದರು.

# ಸಮಾವೇಶದ ತುಣುಕುಗಳು

ನಾವು ಸುಮಾರು 150 ಮಹಿಳೆಯರು ಡೀಡ್ಸ್ ಸಂಸ್ಥೆಯ ತರಬೇತಿಯಲ್ಲಿ ಭಾಗವಹಿಸಿದ್ದೆವು. ನಮಗೆ ಕಾನೂನಿನ ಬಗ್ಗೆ ಅರಿವಿರಲಿಲ್ಲ. ಅದರಲ್ಲೂ



ಮದುವೆ ನೋಂದಣಿ ಕುರಿತು ಗೊತ್ತೇ ಇರಲಿಲ್ಲ. ಇವರು ತಿಳಿಸಿಕೊಟ್ಟರು. ಗ್ರಾಮ ಲೆಕ್ಕಾಧಿಕಾರಿಯವರು ಮದುವೆ ನೋಂದಣಿ ಮಾಡುತ್ತಾರೆ, ಹೋಗಿ ಕೇಳಿ ಎಂದು ಹೇಳಿದರು. ನಾವು ಗ್ರಾಮ ಲೆಕ್ಕಾಧಿಕಾರಿಗಳನ್ನು ಭೇಟಿ ಮಾಡಿ ನಮಗೆ ಮದುವೆ ನೋಂದಣಿ ಮಾಡಿಕೊಡಿ ಎಂದು ಕೇಳಿದೆವು. ಅವರು, ನಿಮಗೆ ಯಾರು ಹೇಳಿದರು? ಆ ರೀತಿಯ ಆದೇಶ ನಮಗೆ ಬಂದಿಲ್ಲ ಎಂದು ಹೇಳಿ ಕಳಿಸಿದರು. ಆಗ ಮತ್ತೆ ಜಯಶ್ರೀ ಹಿರೇಮಠ ಹಾಗೂ ಫಕ್ಕೀರಮ್ಮ ಲಕ್ಕುಂಡಿ ಅವರೊಂದಿಗೆ ನಾವು ಗ್ರಾಮ ಲೆಕ್ಕಾಧಿಕಾರಿಗಳನ್ನು ಭೇಟಿ ಮಾಡಿದೆವು. ಗ್ರಾಮ ಲೆಕ್ಕಾಧಿಕಾರಿಗಳಿಗೆ ಸರ್ಕಾರ ಹೊರಡಿಸಿದ ಆದೇಶ ಪ್ರತಿಯನ್ನು ತೋರಿಸಿ ಕೇಳಿದೆವು. ಆಗ ಅವರು ಮತ್ತೆ ನಮಗೆ ಆದೇಶ ಪತ್ರ ಬಂದ ಮೇಲೆ ಮದುವೆ ನೋಂದಣಿ ಮಾಡುತ್ತೇವೆ ಎಂದು ಹೇಳಿದರು. ಆದ್ದರಿಂದ ನಮ್ಮ ಗದಗ ಜಿಲ್ಲೆಯ ಎಲ್ಲ ಗ್ರಾಮಗಳ ಎಲ್ಲ ಮಹಿಳೆಯರ ಪರವಾಗಿ ಈ ಒಂದು ಮನವಿಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ದಯವಿಟ್ಟು ನ್ಯಾಯಾಧೀಶರು, ಗ್ರಾಮ ಲೆಕ್ಕಾಧಿಕಾರಿಗಳು ಮದುವೆ ನೋಂದಣಿ ಮಾಡುವಂತೆ, ಎಲ್ಲ ಮಹಿಳೆಯರಿಗೆ ಮದುವೆ ನೋಂದಣಿ ಸರ್ಟಿಫಿಕೇಟ್ ಸಿಗುವಂತೆ ಮಾಡಿ ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

**ಶರಣಮ್ಮ ಪಸಗಿಮಠ**
**ಭಾಗಾರ್ಥಿ, ನರಸಾಪೂರ**

ನಾವು ಮಹಿಳೆಯರಿಗೆ ಮೂರು ಹಂತದ ತರಬೇತಿಗಳನ್ನು ಮಾಡಿದ್ದೇವೆ. ನಾವು ಮಕ್ಕಳ ಜೊತೆಯಲ್ಲಿ ಕೆಲಸ ಮಾಡುವುದರಿಂದ ಮಕ್ಕಳ ಪರಿಚಯ




ಮಾತ್ರ ಇತ್ತು. ಮಹಿಳೆಯರ ಜೊತೆ ಕೆಲಸ ಮಾಡುವುದು ಗೊತ್ತಿರಲಿಲ್ಲ. ನಮಗೆ ಡೀಡ್ಸ್ ಸಂಸ್ಥೆಯವರು ತರಬೇತಿ ಕೊಟ್ಟು, ತಳಮಟ್ಟದಲ್ಲಿ ತರಬೇತಿ ಮಾಡಿ ನಮ್ಮ ತರಬೇತಿ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರು. ಇದರಿಂದಾಗಿ ಹೆಚ್ಚು ಹೆಚ್ಚು ಮಹಿಳೆಯರ ಮತ್ತು ಬೇರೆ ಬೇರೆ ಸಂಸ್ಥೆಯವರ ಪರಿಚಯವಾಯಿತು. ಈ ತರಬೇತಿಗಳನ್ನು ಮಾಡಿದ ನಂತರ ತುಂಬಾ ಮಹಿಳೆಯರು 1098 ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ಬಾಲ್ಯವಿವಾಹ ನಡೆಯುತ್ತಿರುವ ಬಗ್ಗೆ, ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಮಹಿಳೆಯರ ಜೊತೆ ಕೆಲಸ ಮಾಡಿದ್ದು ಸಂತೋಷವನ್ನುಂಟು ಮಾಡಿದೆ. ಇನ್ನೂ ಬೇರೆ ಬೇರೆ ವಿಷಯಗಳ ಕುರಿತು ನಮಗೆ ಮಾಹಿತಿ ಕೊಡಿ ಎಂದು ಮಹಿಳೆಯರು ಹೇಳಿದ್ದಾರೆ. ಈ ಒಂದು ಅವಕಾಶವನ್ನು ಒದಗಿಸಿ ಕೊಟ್ಟ ಡೀಡ್ಸ್ ಸಂಸ್ಥೆಗೆ ವಂದನೆಗಳು.

**ಗೀತಾ ಪತ್ತಾರ, ಸುಗಮಗಾರರು**
**ಸೃಷ್ಟಿ ಸಮಗ್ರ ನಗರ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ)**

ನಮ್ಮ ಸಂಸ್ಥೆಯಿಂದ ನಾವೆಲ್ಲರೂ ನಾಲ್ಕು ದಿನಗಳಂತೆ ಮೂರು ಹಂತದ ತರಬೇತಿಯನ್ನು ಪಡೆದುಕೊಂಡಿದ್ದೇವೆ. ನಮಗೆ ಮುಂದೆ ಗುರಿ ಇತ್ತು, ಹಿಂದೆ



ಡೀಡ್ಸ್ ಗುರುವಾಗಿ ನಿಂತು ಸೂಕ್ತ ಬೆಂಬಲ ಕೊಟ್ಟಿತು. ಮಹಿಳೆಯರಿಗೆ ತರಬೇತಿ ಮಾಡುವುದಷ್ಟೇ ಅಲ್ಲದೆ ಅವರಿಗೆ ಕಾನೂನು ಮಾಹಿತಿಯುಳ್ಳ ಕರಪತ್ರಗಳನ್ನು ಹಂಚಲು ಪ್ರಿಂಟ್ ಮಾಡಿ ಒದಗಿಸಿತು. ಯಾವುದಾದರೂ ಇಲಾಖೆಗೆ ಹೋಗಿ ಫೋನ್ ನಂಬರ್ ಕೊಡಿ ಎಂದರೆ ಅವರು ಕೊಡುವುದಿಲ್ಲ. ಆದರೆ, ಪ್ರತಿಯೊಂದು ಹಳ್ಳಿಗೂ, ಪ್ರತಿ ಮಹಿಳೆಗೂ ತಲುಪುವಂತೆ, ಎಲ್ಲ ಇಲಾಖೆಗಳ ಫೋನ್ ನಂಬರುಗಳನ್ನು ಸಹಾಯ ಸೂಚಿಯಲ್ಲಿ ಪ್ರಿಂಟ್ ಮಾಡಿ ಡೀಡ್ಸ್‌ನವರು ಕೊಟ್ಟಿದ್ದಾರೆ. ಮಹಿಳೆಯರಿಗೆ ಸಹಾಯವಾಣಿಗೆ ಫೋನ್ ಮಾಡಿ ದೌರ್ಜನ್ಯದಿಂದ ಹೊರಗೆ ಬರಬಹುದು ಎಂಬ ಧೈರ್ಯ ಈಗ ಬಂದಿದೆ. ನಮ್ಮ ತರಬೇತಿಗಳು ಮಹಿಳೆಯರ ಮನ ಮುಟ್ಟಿವೆ. ಕೇವಲ ಭಾಗ್ಯಲಕ್ಷ್ಮಿ ಬಾಂಡ್ ಮಾಡಿಸುವ ಮಹಿಳೆಯರಿಗೆ ಮಾತ್ರ ಮದುವೆ ನೋಂದಣಿ ಮಾಡಿಸಬೇಕೆಂದು ಗೊತ್ತಿತ್ತು. ನಾವು ತರಬೇತಿ ಮಾಡಿದ ಮೇಲೆ ಎಲ್ಲರಿಗೂ ಮದುವೆ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಗೊತ್ತಾಗಿದೆ. ಈಗ ಸಾಕಷ್ಟು ಮಹಿಳೆಯರು ಮದುವೆ ನೊಂದಣಿ ಮಾಡಿಸಿಕೊಳ್ಳಲು ಮುಂದಾಗಿದ್ದಾರೆ. ಈ ರೀತಿಯ ತರಬೇತಿಗಳಲ್ಲಿ ಭಾಗವಹಿಸಿದ್ದು ನಮಗೆ ಹೆಮ್ಮೆಯ ಸಂಗತಿಯಾಗಿದೆ.

**ಜಯಶ್ರೀ ಹಿರೇಮಠ**
**ಅಧ್ಯಕ್ಷರು, ಮಹೇಶ್ವರಿ ವಿವಿದೋದ್ದೇಶಗಳ ಮಹಿಳಾ ಮಂಡಳಿ(ರಿ)**







ಪೂರಕ ಕಾನೂನು ಸುಗಮಗಾರರ ಮತ್ತು ಭಾಗಾರ್ಥಿಗಳ
ಸಮಾವೇಶ


ಸಹಭಾಗಿ ಸ್ವಯಂ ಸೇವಾ ಸಂಸ್ಥೆಗಳು–ಗದಗ
ಗದಗ ಜಿಲ್ಲಾ ಪೂರಕ ಕಾನೂನು ಸುಗಮಗಾರರ ಘಟಕ
ಇವರ ಸಹಯೋಗದಲ್ಲಿ
ಪೂರಕ ಕಾನೂನು ಸುಗಮಗಾರರ ಮತ್ತು ಭಾಗಾರ್ಥಿಗಳ













# ಕೊಪ್ಪಳ ಜಿಲ್ಲೆ

## ಕಲಿಕಾ ಪ್ರವಾಸ

ಮೇ 19ರಂದು ಪೂರಕ ಕಾನೂನು ಸುಗಮಗಾರರಿಗೆ ಒಂದು ದಿನದ ಕ್ಷೇತ್ರ ಭೇಟಿಯನ್ನು ಡೀಡ್ಸ್ ಸಂಸ್ಥೆಯಿಂದ ಆಯೋಜಿಸಲಾಗಿತ್ತು, ಕರ್ನಾಟಕದ



ಹಾವೇರಿ ಜಿಲ್ಲೆಯ ಹೆಸರಾಂತ ಉತ್ಸವ ರಾಕ್ ಗಾರ್ಡನ್‌ಗೆ ಭೇಟಿ ನೀಡಿ ಅಲ್ಲಿಯ ಜನಪದ ಸಂಸ್ಕೃತಿಯ ಕಲಾ ತಾಣವನ್ನು ಮನಸಾ ಆಸ್ವಾದಿಸಿದೆವು. ಒಟ್ಟು 14 ಜನ ಸುಗಮಗಾರರು, ಡೀಡ್ಸ್‌ನ ತುಕಾರಾಂ ಎಕ್ಕಾರು ಹಾಗೂ ಶರಣಪ್ಪ ಉಪ್ಪಾರ ಭಾಗವಹಿಸಿದ್ದರು

## ಪೂರಕ ಕಾನೂನು ತರಬೇತಿ ಮತ್ತು ಸಹಭಾಗಿ ಸಂಸ್ಥೆಗಳ ಪ್ರತಿಕ್ರಿಯೆ

ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಕಾನೂನಿನ ಅರಿವು ಮೂಡಿಸಲು, ಅವರ ಸಮಸ್ಯೆಗಳಿಗೆ ಸ್ಪಂದಿಸಲು ಡೀಡ್ಸ್ ನೀಡಿದ ತರಬೇತಿ ಹಲವು ರೀತಿಯಲ್ಲಿ ಪ್ರಯೋಜನವಾಗಿದೆ. ಸಂಸ್ಥೆಯ ಪ್ರತಿನಿಧಿ ಹಾಗೂ ಅವರ ಕುಟುಂಬಗಳಿಗೆ ಕಾನೂನುಗಳ ಅರಿವು ಸಿಕ್ಕಿದೆ. ಜಿಲ್ಲೆಯ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಸಂಪರ್ಕ ಬೆಳೆಯಿತು. ಸಾಂತ್ವನದ ಸಿಬ್ಬಂದಿಗಳಿಗೆ ಮಹಿಳಾ ಕಾನೂನು, ಪ್ರಕರಣ ನಿರ್ವಹಣೆ ತರಬೇತಿಯಿಂದಾಗಿ ಕ್ಲಿಷ್ಟಕರ ಪ್ರಕರಣಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಲು ಸಾಧ್ಯವಾಯಿತು. ಪೂರಕ ಕಾನೂನು ತರಬೇತಿಯಿಂದಾಗಿ ಹದಿ ಹರೆಯದ ಹೆಣ್ಣುಮಕ್ಕಳಿಗೆ, ಅವರ ಪೋಷಕರಿಗೆ ಅವರ ದಿನ ನಿತ್ಯದ ಬದುಕಿಗೆ ಸಹಾಯವಾಗುವ ಕಾನೂನಿನ ಮಾಹಿತಿ ನೀಡಲು ಅನುಕೂಲವಾಗಿದೆ. ತರಬೇತಿ ಕೈಪಿಡಿಗಳು ನಮ್ಮ ತರಬೇತಿಗೆ ಉಪಯುಕ್ತವಾಗಿವೆ. ಈ ತರಬೇತಿಯನ್ನು ಮುಂದುವರಿಸಿಕೊಂಡು ಹೋಗಬಹುದು ಎಂಬ ಆಲೋಚನೆ ಈಗ ಹುಟ್ಟಿದೆ. ಆಪ್ತ ಸಮಾಲೋಚನೆಯ ಮಾಹಿತಿ ಸಿಕ್ಕಿದೆ. ನಮ್ಮ ಕಾರ್ಯಕ್ಷೇತ್ರದ ಜನರಲ್ಲಿ ಮಾತುಗಾರಿಕೆ ಬೆಳೆದಿದೆ. ನಮ್ಮ ಕೇಂದ್ರಕ್ಕೆ ಬರುವ ಮಹಿಳೆಯರಿಗೆ ದೌರ್ಜನ್ಯಗಳನ್ನು ಎದುರಿಸಲು, ಸಾಂತ್ವನ ನೀಡಲು, ನೊಂದ ಮಹಿಳೆಯರಿಗೆ ಮಾರ್ಗದರ್ಶನ ಮಾಡಲು ಸಹಾಯವಾಗಿದೆ. ಸಂಸ್ಥೆಯ ಸಿಬ್ಬಂದಿಗಳು ಕಾನೂನು ಅರಿವು ಹೊಂದಲು ಮತ್ತು ಅದನ್ನು ಕಾರ್ಯಕ್ಷೇತ್ರದ ಮಹಿಳೆಯರಿಗೆ ತಲಪಿಸಲು ಸಾಧ್ಯವಾಗಿದೆ. ಇದರಿಂದಾಗಿ ನೊಂದ ಮಹಿಳೆಯರಿಗೆ ಸಾಕಷ್ಟು ಸಹಾಯವಾಗಿದೆ. ಇತರ ಸಂಘ ಸಂಸ್ಥೆಗಳಿಗೆ ನಮ್ಮ ಸಂಸ್ಥೆಯು ಪರಿಚಯವಾಗಲು ಈ ತರಬೇತಿ ತುಂಬಾ ಸಹಾಯಕವಾಗಿದೆ.

**ಆನಂದ ಎಸ್ ಹಳ್ಳಿಗುಡಿ, ಅಭಿನವ ಶ್ರೀ ಸಿದ್ದೇಶ್ವರ ಗ್ರಾ. ಶಿ. ಕ್ಷೇಮಾಭಿವೃದ್ಧಿ ಸಂಸ್ಥೆ**
**ಸರೋಜಾ ಬಾಕಳೆ, ಮಹಿಳಾ ವೃತ್ತಿಶಿಕ್ಷಣ ಮತ್ತು ಅಭಿವೃದ್ಧಿ ಸಂಘ**
**ರಾಜಕುಮಾರ್ ಕಾತರಕಿ, ಕರ್ನಾಟಕ ಆರೋಗ್ಯ ಸಂವರ್ಧನಾ ಪ್ರತಿಷ್ಠಾನ,**
**ಶಂಕರ್ ಡಿ ಸುರಾಳ, ಧ್ವನಿ ಸ್ವಯಂಸೇವಾ ಸಂಸ್ಥೆ,**
**ಶ್ರೀ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘ**
**ರಾಜಾ ಬಕ್ಷಿ, ಸೇವಾ ಕೌಟುಂಬಿಕ ಸಲಹಾ ಕೇಂದ್ರ,**
**ನಾಗರಾಜ ದೇಸಾಯಿ, ಸರ್ವೋದಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ.**

## ತಳಮಟ್ಟದ ತರಬೇತಿ ಕಾರ್ಯಕ್ರಮಗಳು

ಗದಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಮೂರು ವರುಷಗಳ ಪೂರಕ ಕಾನೂನು ತರಬೇತಿ ಸಂಪನ್ನಗೊಂಡಿದ್ದು ಕಾರ್ಯಕ್ರಮದ ಒಟ್ಟು ಫಲಿತಾಂಶ ಇಲ್ಲಿದೆ.

ಕೊಪ್ಪಳ ಜಿಲ್ಲೆಯಲ್ಲಿ 30 ಸುಗಮಗಾರರು 343 ಕಾರ್ಯಕ್ರಮಗಳನ್ನು ನೀಡಿ, ಲಿಂಗತ್ವ ಮಾಹಿತಿಯನ್ನು 2,364 ಜನರಿಗೆ, ಕಾನೂನು ಮಾಹಿತಿಯನ್ನು 2,078 ಜನರಿಗೆ, ಮಹಿಳಾ ಪ್ರಕರಣಗಳ ನಿರ್ವಹಣೆ ಮಾಹಿತಿಯನ್ನು 2,384 ಜನರಿಗೆ ನೀಡಿದ್ದಾರೆ. ಸುಮಾರು 30 ಸಾವಿರ ಮನೆಗಳಿಗೆ ಭಾಗಾರ್ಥಿಗಳು ಪ್ರಚಾರ ಸಾಮಗ್ರಿಗಳನ್ನು ತಲಪಿಸಿದ್ದಾರೆ.

ಗದಗ ಜಿಲ್ಲೆಯಲ್ಲಿ 31 ಸುಗಮಗಾರರು 130 ಕಾರ್ಯಕ್ರಮಗಳನ್ನು ನಡೆಸಿ 3,186 ಮಂದಿಗೆ ಲಿಂಗತ್ವ ಮಾಹಿತಿಯನ್ನು, 26 ಸುಗಮಗಾರರು 123 ಕಾರ್ಯಕ್ರಮಗಳಲ್ಲಿ 2,954 ಮಂದಿಗೆ ಕಾನೂನು ಮಾಹಿತಿಯನ್ನು, 25 ಸುಗಮಗಾರರು 145 ಕಾರ್ಯಕ್ರಮಗಳಲ್ಲಿ 3,443 ಮಂದಿಗೆ ಪ್ರಕರಣ ನಿರ್ವಹಣೆ ಮಾಹಿತಿಯನ್ನು ನೀಡಿದ್ದಾರೆ. ಸುಮಾರು 32,000 ಮನೆಗಳಿಗೆ ಭಾಗಾರ್ಥಿಗಳು ಪ್ರಚಾರ ಸಾಮಗ್ರಿಗಳನ್ನು ತಲಪಿಸಿದ್ದಾರೆ.

## ಮಹಿಳಾ ಪ್ರಕರಣಗಳ ನಿರ್ವಹಣಾ ಕಾರ್ಯತಂತ್ರ ಕಾರ್ಯಾಗಾರ

ಕೊಪ್ಪಳದ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಸರ್ವೋದಯ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಡೀಡ್ಸ್ ಸಂಸ್ಥೆಯ ಸಹಯೋಗದಲ್ಲಿ ಮಹಿಳಾ ಪ್ರಕರಣಗಳ ನಿರ್ವಹಣಾ ಕಾರ್ಯತಂತ್ರ ಕಾರ್ಯಾಗಾರವು 13.06.2019 ರಂದು ನಡೆಯಿತು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶ್ರೀಮತಿ ಜಯಶ್ರೀ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮರ್ಲಿನ್ ಮಾರ್ಟಿಸ್ ಅವರು ಪ್ರಾಸ್ತಾವಿಕ ನುಡಿಯನ್ನಾಡಿದರು. ಅಧ್ಯಕ್ಷತೆಯನ್ನು ಶ್ರೀ ನಾಗರಾಜ ದೇಸಾಯಿಯವರು ವಹಿಸಿದ್ದು ಮುಖ್ಯ ಅತಿಥಿಗಳಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಎಲಿಗಾರ್, ಪೊಲೀಸ್ ಠಾಣಾಧಿಕಾರಿಗಳಾದ ಸಾಧನ ದೀಕ್ಷಿತ್, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಸಪ್ಪ ಹಾದಿಮನಿಯವರು ಭಾಗಹಿಸಿದ್ದರು. ಮೋಹನ್‌ಚಂದ್ರ, ತುಕಾರಾಂ ಎಕ್ಕಾರು ಉಪಸ್ಥಿತರಿದ್ದರು, ಕೊಪ್ಪಳ, ಕಾರಟಗಿ ಕನಕಗಿರಿ, ಗಂಗಾವತಿ ಯಲಬುರ್ಗಾ ತಾಲೂಕಿನ ಮಹಿಳಾ ಸಾಂತ್ವನ ಸಹಾಯವಾಣಿಯ




ಸಿಬ್ಬಂದಿಗಳು, ಅಂಗನವಾಡಿ ಮೇಲ್ವಿಚಾರಕರು, ಮಹಿಳಾ ವೃತ್ತಿ ಶಿಕ್ಷಣ ಸಂಸ್ಥೆ, ಸ್ವರಭಾರತಿ, ಸರ್ವೋದಯ, ಅಭಿನವ ಶ್ರೀ ಸಿದ್ದೇಶ್ವರ ಸಂಸ್ಥೆ, ಕಾರ್ಗಿಲ್ ಮಲ್ಲಯ್ಯ ವಿಕಲಚೇತನರ ಸಂಘ, ಸಹಜಾ ಟ್ರಸ್ಟ್, ವೆಡ್ಸ್ ಸಂಸ್ಥೆ, ಕೆ ಹೆಚ್.ಪಿ.ಟಿ ಸಂಸ್ಥೆ, ಧ್ವನಿ ಸಂಸ್ಥೆ, ಸೇವಾ ಸಂಸ್ಥೆ, ಸಂಭ್ರಮ, ಯುನಿಸೆಫ್, ಕೊಪ್ಪಳ ಜಿಲ್ಲಾ ಮಕ್ಕಳ ಸಹಾಯವಾಣಿಯ ಮುಖ್ಯಸ್ಥರು/ ಪ್ರತಿನಿಧಿಗಳು ಮತ್ತು ಪೂರಕ ಕಾನೂನು ಸುಗಮಗಾರರು, ಸ್ವಯಂ ಸೇವಕರುಗಳು ಸೇರಿದಂತೆ 45 ಜನರು ಭಾಗವಹಿಸಿದ್ದರು.




ಎಜುಕೇಶನ್ ಸರ್ವಿಸ್
ಸಮಗ್ರ ಗ್ರಾಮೀಣಾಭಿವೃದ್ಧಿ


ಕಾನೂನು ಸುಗಮಕಾರರ
ಸಹಯೋಗದಲ್ಲಿ

ಸಂಸ್ಥೆಗಳು, ಕೊಪ್ಪಳ
ಸಮುಚ್ಚಯ, ಕೊಪ್ಪಳ



ಪೂರಕ ಕಾನೂನು ಸುಗಮಕಾರರ
ಇವರ ಸಹಯೋಗದಲ್ಲಿ
ಕಾನೂನು ಸುಗಮಕಾರರ ಮತ್ತು


# ಸಮಾವೇಶದ ತುಣುಕುಗಳು

ನಮ್ಮ ಮನೆಯವ್ರು ತೀರಿ ಹೋದಮ್ಯಾಲೆ, ನಾವು ಬಹಳ ಕಷ್ಟದಲ್ಲಿ ಇದ್ವಿ, ಆವಾಗ ಯಾರೂ ನಮ್ಮ ಬೆಂಬಲಕ್ಕೆ ನಿಲ್ಲಿಲ್ಲ. ಈ ತರಹದ



ಸಂಘ-ಸಂಸ್ಥೆಗಳು ನಮ್ಮ ಬೆಂಬಲಕ್ಕೆ ನಿಂತು ನಮಗೆ ಧೈರ್ಯ ಹೇಳಿದ್ರು. ಆವಾಗ ನಾನು ಬದುಕ ಕಟಿಗೊಂಡೆ, ಮತ್ತು ಕೊಪ್ಪಳದ ಕೆ ಹೆಚ್‌ಪಿಟಿ ಸಂಸ್ಥೆಯಿಂದಲೂ ನನಗೆ ತುಂಬಾ ಸಹಾಯವಾಗಿದೆ. ಈ ತರ ನೀವೂ ಸಂಘಟನೆಗೆ ಸೇರಿ ನಾನು ಒಬ್ಳೆ ಇದಿನಿ ಅನ್ನೋ ಚಿಂತಿ ದೂರ ಮಾಡ್ಕೊಳ್ಳಿ ಅಂತ ಹೇಳೋಕ ಇಷ್ಟ ಪಡ್ತಿನಿ.

**ವಿಜಯಲಕ್ಷ್ಮೀ, ಭಾಗಾರ್ಥಿ, ಓಝುನಳ್ಳಿ, ಕೊಪ್ಪಳ..**

ಸುಗಮಗಾರರ ಮೂಲಕ ತಳಮಟ್ಟದ ಮಹಿಳೆಯರಿಗೆ ಕಾನೂನು ಸೇವಾ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವುದು ನನಗೆ ತುಂಬಾ ಸಂತೋಷ ತಂದಿದೆ. ನಾನು ಮೊದಲಿಗೆ ಹಲವಾರು ಇಲಾಖೆ, ಸಂಸ್ಥೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರೋಗ್ಯ, ಪರಿಸರ, ಶಿಕ್ಷಣ, ಪೌಷ್ಟಿಕತೆ, ಸರ್ಕಾರಿ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಿದ್ದೆ. ಆದರೆ ಒಬ್ಬ ಪೂರಕ ಕಾನೂನು ಸುಗಮಗಾರರನ್ನಾಗಿ ನಮ್ಮನ್ನ ರೂಪಿಸಿ ಕಾನೂನುಗಳ ಬಗ್ಗೆ ಜನರಲ್ಲಿ




ತಿಳುವಳಿಕೆ ಮೂಡಿಸುವ ಈ ಕೆಲಸದಿಂದಾಗಿ ಜನರು ಈಗ ನಮ್ಮನ್ನು ವಕೀಲರ ತರ ನೋಡುತ್ತಿದ್ದಾರೆ. ಒಬ್ಬ ಉತ್ತಮ ಮಾತುಗಾರ, ಮಾಹಿತಿದಾರ, ಮಾರ್ಗದರ್ಶಕ ಎಂದು ಗುರುತಿಸುತ್ತಿದ್ದಾರೆ. ಎಲ್ಲೋ ಇದ್ದ ನಮ್ಮನ್ನ ಒಂದೆಡೆ ಸೇರಿಸಿ ಸಂಪನ್ಮೂಲ ವ್ಯಕ್ತಿಗಳನ್ನಾಗಿ ರೂಪಿಸಿದ ಡೀಡ್ಸ್ ಸಂಸ್ಥೆಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

**ವಿರೇಶ್ ಹಾಲಗುಂಡಿ, ಸುಗಮಗಾರರು, ಶ್ರೀ ಕಾರ್ಗಿಲ್ ಮಲ್ಲಯ್ಯ ವಿಕಲಚೇತನರ ಸಂಘ ಅಳವಂಡಿ**



ನಾವು ಈ ಪೂರಕ ಕಾನೂನು ಯೋಜನೆಯ ಭಾಗೀದಾರರಾಗಲು ಕಾರಣ ಏನೆಂದರೆ, ನಮ್ಮ ಸಂಸ್ಥೆಯಿಂದಲೂ ಇಬ್ಬರು ಸುಗಮಗಾರರನ್ನು ಕಳಿಸಿಕೊಡಲಾಗಿದೆ, ಹದಿಹರೆಯದ ಹೆಣ್ಣುಮಕ್ಕಳಿಗೆ ಮತ್ತು ಅವರ ಪಾಲಕರಿಗೆ ಕಾನೂನು ಅರಿವು ಮೂಡಿಸುತ್ತಿರುವುದು ನಮ್ಮ ಕಾರ್ಯಕ್ಷೇತ್ರದ ಫಲಾನುಭವಿಗಳಿಗೆ ತುಂಬಾ ಉಪಯೋಗವಾಗಿದೆ. ನಮ್ಮ ಇಬ್ಬರು ಸಿಬ್ಬಂದಿಗಳು 12 ದಿನಗಳ ತರಬೇತಿಯನ್ನು ಪೂರ್ಣಗೊಳಿಸಿ ಅದನ್ನು ತಳಮಟ್ಟದಲ್ಲಿರುವ ನಮ್ಮ ಸ್ಫೂರ್ತಿ ಯೋಜನೆಯ ಕಿಶೋರಿಯರಿಗೆ ಮತ್ತು ಅವರ ಪಾಲಕರಿಗೆ ಪರಿಣಾಮಕಾರಿಯಾಗಿ ತಲಪಿಸಿದ್ದಾರೆ. ಇದು ನಮಗೆ ಖುಷಿಯ ವಿಚಾರ. ಈ ಅವಕಾಶ ಕಲ್ಪಿಸಿಕೊಟ್ಟ ಡೀಡ್ಸ್ ಸಂಸ್ಥೆಗೆ ತುಂಬು ಹೃದಯದ ಅಭಿನಂದನೆಗಳು,

**ರಾಜ್‌ಕುಮಾರ್ ಕಾತರಕಿ, ಜಿಲ್ಲಾ ಸಂಯೋಜಕರು, ಕೆ.ಹೆಚ್.ಪಿ.ಟಿ ಕೊಪ್ಪಳ**



ನಾವು ನಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಬಿಡುವುದಲ್ಲ. ಅವರು ಶಾಲೆಗೆ ಹೋಗುತ್ತಾರೋ ಅಥವಾ ಬೇರೆ ಎಲ್ಲಿಯಾದರೂ ಹೋಗುತ್ತಾರೋ ಎಂದು ಗಮನಿಸಬೇಕು. ಪಾಲಕರ ಸಭೆಯಲ್ಲಿ ನಾವು ಭಾಗವಹಿಸಬೇಕು. ನಾವು ಮಕ್ಕಳನ್ನು ಚಿಕ್ಕ ವಯಸ್ಸಿನಿಂದಲೇ ಬಹಳ ಪ್ರೀತಿಯಿಂದ ವಿಚಾರಿಸುತ್ತಿರಬೇಕು. ಏಕೆಂದರೆ ಅವರಿಗೆ ಇನ್ನೂ 18 ವರ್ಷಗಳು ತುಂಬಿರುವುದಿಲ್ಲ. ಅವರ ಮೇಲೆ ಏನಾದರೂ ಕಿರುಕುಳ ಆದರೆ ಮಕ್ಕಳ ಕಾನೂನು ಬಳಸಿ ದೂರು ನೀಡಬೇಕು ಎಂಬುದನ್ನೆಲ್ಲಾ ಡೀಡ್ಸ್‌ನ ತರಬೇತಿಯಿಂದ ನಾನು ತಿಳಿದೆ. 18 ವರ್ಷಗಳು ತುಂಬಿದ ಮೇಲೆ ನಮ್ಮ ಹೆಣ್ಣುಮಕ್ಕಳಿಗೆ ಮದುವೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಸರಸ್ವತಿ ರುದ್ರಯ್ಯ ಹಿರೇಮಠ, ಭಾಗಾರ್ಥಿ – ಇರಕಲ್‌ಗಡಾ**

**ತಳಮಟ್ಟದ ತರಬೇತಿಗಳ ಯೋಜನಾ ಸಭೆ**

ಕೊಪ್ಪಳದ ಸಮೂಹ ಸಂಸ್ಥೆ ಸಭಾಂಗಣದಲ್ಲಿ ಪೂರಕ ಕಾನೂನು ಸುಗಮಗಾರರಿಗೆ ಯೋಜನಾ ಸಭೆಯನ್ನು 08.04.2019 ರಂದು ಆಯೋಜಿಸಲಾಗಿತ್ತು. ತಳಮಟ್ಟದ ತರಬೇತಿ ಕಾರ್ಯಕ್ರಮಗಳ ಅವಲೋಕನ ಹಾಗೂ ನಿಗದಿ ಪಡಿಸಿದ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮಾಡಿ ಮುಗಿಸಲು ಇದನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 9 ಜನ ಸುಗಮಗಾರರು ಹಾಗೂ ಡೀಡ್ಸ್‌ನ ತುಕಾರಾಂ ಎಕ್ಕಾರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರಾದ ಶರಣಪ್ಪ ಉಪ್ಪಾರ ಸ್ವಾಗತಿಸಿ ವಂದಿಸಿದರು.

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ

ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A news letter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824-2217022, 4281037

E-mail: deeds82@rediffmail.com, Website: www.deedsmangaluru.in